CC No.367 /2017

PW - 1

ದಿನಾಂಕ 27.11.2019 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಆರೋಪಿ ಪರ ಶ್ರೀ ಸಿ.ಎಂ.ಕೆ ವಕೀಲರಿಂದ ಃ

ಈ ಪ್ರಕರಣದಲ್ಲಿ ಸಲ್ಲಿಸಿದ ದಾಖಲೆಗಳ ಬಗ್ಗೆ ನನಗೆ ಗೊತ್ತು. ನಿಪಿ-7 ರಲ್ಲಿ ನೋಟೀಸನ್ನು ಯಾರಿಗೆ ನೀಡಲಾಗಿದ್ದೆ ಎಂದು ಅದರಲ್ಲಿ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಪಿ-8 ಮತ್ತು 9 ರಲ್ಲಿರುವ ಸಂಖ್ಯೆಗಳು ಒಂದಕ್ಕೊಂದು ಸಂಬಂದಪಟ್ಟಿದೆ ಎಂದು ತೋರಿಸುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-9 ನ್ನು ಯಾವ ದಿನಾಂಕ, ತಿಂಗಳು ಹಾಗೂ ಇಸವಿಯಲ್ಲಿ ಕಳುಹಿಸಿದ್ದಾರೆಂದು ಅದರಲ್ಲಿ ನಮೂದನೆ ಇಲ್ಲ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ-9 ರಲ್ಲಿ ಅಂಚೆ ಕಛೇರಿಯ ಸೀಲು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-8 ಆರೋಪಿಗೆ ಕಳುಹಿಸಿದ ಬಗ್ಗೆ ಅಂಚೆ ರಶೀದಿ ಅಲ್ಲ ಎಂದರೆ ಸರಿಯಲ್ಲ. ನಿಪಿ-9 ರಲ್ಲಿರುವ ವಿಜಯಮ್ಮರವರ ಸಹಿ ಆರೋಪಿಯ ಹೆಂಡತಿಯವರದು ಅಲ್ಲ ಎಂದರೆ ಸರಿಯಲ್ಲ. ನಿಪಿ-7 ರಿಂದ 9 ಅನ್ನು ನಾನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಬ್ಯಾಂಕಿನಲ್ಲಿ ನಿಪಿ-3 ಮತ್ತು ನಿಪಿ-4 ಅಂದರೆ ಚಲನ್ ಅನ್ನು ನನ್ನ ಮಗ ತುಂಬಿರುತ್ತಾರೆ. ಅದೇ ರೀತಿ ನನ್ನ ಮಗ ನಿಪಿ-1 ಮತ್ತು 2 ರಲ್ಲಿರುವ ಬರವಣಿಗೆಯನ್ನು ಬರೆದಿದ್ದರು ಎಂದರೆ ಸರಿಯಲ್ಲ. ನಿಪಿ-10 ರಲ್ಲಿರುವ 1 ನೇ ಪುಟದಲ್ಲಿ Sencond Party NIL ಎಂದು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-10 ಅನ್ನು ನಾನು ಉದ್ದೇಶ ಪೂರ್ವಕವಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ರ ದಾಖಲೆಯ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ.

ನಾನು ವಿಜಯಮ್ಮರವರನ್ನು ಕೇಳಿ ಅವರ ಒಪ್ಪಿಗೆ ಪಡೆದು ಸಾಲ ಕೊಟ್ಟಿದ್ದೆ. ವಿಜಯಮ್ಮರವರಿಗೆ ನೇರವಾಗಿ ಸಾಲ ಕೊಡಲು ಮತ್ತು ಅವರಿಂದ ಸಾಲದ ಒಪ್ಪಿಗೆ ಕರಾರು ಪತ್ರವನ್ನು ಬರೆದು ಪಡೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನನಗೆ ಸ್ವಂತ ವರಮಾನ ಇಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಬೆಲೆ ಅಂಗಡಿಯಲ್ಲಿ ಬಿ.ಪಿ.ಎಲ್ ಕಾರ್ಡನ್ನು ಹೊಂದಿದ್ದೇನೆ ಎಂದರೆ ಸಾಕ್ಷಿ ಬಿ.ಪಿ.ಎಲ್ ಕಾರ್ಡನ್ನು ನಾನು ಮಂಗಾಡನಹಳ್ಳಿ ಗ್ರಾಮದಲ್ಲಿ ಹೊಂದಿದ್ದೇನೆ. ಸದರಿ ಬಿ.ಪಿ.ಎಲ್ ಕಾರ್ಡ್ ನಲ್ಲಿ ನನ್ನ ಗಂಡ ಮತ್ತು ನನ್ನ ಮಕ್ಕಳ ಹೆಸರನ್ನು ನಮೂದಿಸಿದ್ದೇನೋ ಎಂದು ನನಗೆ ಗೊತ್ತಿಲ್ಲ. ಸದರಿ ಬಿ.ಪಿ.ಎಲ್ ಕಾರ್ಡನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಬಹುದು. ನಿಪಿ-10 ಕ್ಕೆ ಸಹಿ ಮಾಡಿದ ಸಾಕ್ಷಿದಾರರು ಯಾವಾಗ ಸಹಿ ಮಾಡಿದರು ಎಂದು

ನನಗೆ ನೆನಪಿಲ್ಲ. ನಮ್ಮ ಅನುಕೂಲಕ್ಕೆ ತಕ್ಕಂತೆ ನಾನು ರಂಗಮ್ಮರವರ ಸಹಿಯನ್ನು ನಿಪಿ-10 ಕ್ಕೆ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣ ಕೊಟ್ಟ 1 ತಿಂಗಳ ನಂತರ ನನಗೆ ಆರೋಪಿ ಚೆಕ್ಕುಗಳನ್ನು ಕೊಟ್ಟಿರುತ್ತಾರೆ.

ಸಮಯಾವಾಕಾಶ ಕೋರಿದ್ದು ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಚನ್ನಪಟ್ಟಣ